ಶಿವಮೊಗ್ಗ ನಗರ ಸಭೆ ವ್ಯಾಪ್ತಿಯನ್ನು ವಿಸ್ತರಣೆ

514 (898) ಶ್ರೀ ಆಯನೂರು ಮಂಜುನಾಥ **(ಹೊಸನಗರ)**: ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರಸಭಾ ವ್ಯಾಪ್ತಿಯನ್ನು ಇತ್ತೀಚೆಗೆ ವಿಸ್ತರಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ವಿಸ್ತೀರ್ಣ ವಿಸ್ತರಿಸಲಾಗಿದೆ; ಯಾವ ಯಾವ ಗ್ರಾಮಗಳು ಹೊಸದಾಗಿ ಸೇರ್ಪಡೆಯಾಗಿದೆ; ವಿವರವಾದ ಮಾಹಿತಿ ನೀಡುವುದು)?

ಆ) ಬಗರ್‌ಹುಕುಂ ಮಂಜೂರಾತಿ ಮಾಡಲು ಶಿವಮೊಗ್ಗ ನಗರ ವ್ಯಾಪ್ತಿಯಿಂದ 5 ಕಿ.ಮೀ ಒಳಗೆ ಬಗರ್‌ಹುಕುಂ ಮಂಜೂರಾತಿ ಮಾಡಲು ಕಾನೂನಿನ ನಿರ್ಭಂದವಿದೆಯೇ?

ಇ) ಈಗ ಹಾಲಿ ನಗರಸಭಾ ವ್ಯಾಪ್ತಿಯಿಂದ 5 ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಬಗರ್‌ಹುಕುಂ ಅರ್ಜಿದಾರರ ಸಂಖ್ಯೆ ಎಷ್ಟು: ನಗರಸಭಾ ವ್ಯಾಪ್ತಿಯು ವಿಸ್ತರಣೆಯಾಗುವ 5 ಕಿ.ಮೀ. ವ್ಯಾಪ್ತಿಯಲ್ಲಿದ್ದ ಬಗರ್‌ಹುಕಂ ಅರ್ಜಿದಾರರ ಸಂಖ್ಯೆ ಎಷ್ಟು?

ಈ) 5 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಅರ್ಜಿದಾರರಲ್ಲಿ ಬಹಳಷ್ಟು ಬಡವರು, ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದವರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ರೀತಿಯ ಬಡ ಸಾಗುವಳಿದಾರರಿಗೆ ಸರ್ಕಾರಿ ರಿಯಾತಿ ನೀಡು ಮಂಜೂರಾತಿ ಅವಕಾಶ ನೀಡುವುದೇ;

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಶಿವಮೊಗ್ಗ ನಗರಸಭೆ ವ್ಯಾಪ್ತಿಯನ್ನು ಸರ್ಕಾರದ ಅಧಿಸೂಚನೆ ನಂ.ವನಇ 331 ಎಂಎಲ್‌ಆರ್ 95 ದಿನಾಂಕ 5.10.95 ರಂತೆ 8-50 ಚದರ ಕಿ.ಮೀ ವಿಸ್ತೀರ್ಣವನ್ನು ವಿಸ್ತರಿಸಲಾಗಿದೆ. ಈ ಪ್ರಕಾರ ಈ ಕೆಳಕಂಡ ಗ್ರಾಮಗಳು ಹೊಸದಾಗಿ ಶಿವಮೊಗ್ಗ ನಗರಸಭೆ ವ್ಯಾಪ್ತಿಗೆ ಒಳಪಡುತ್ತವೆ:

1. ಶಿವಮೊಗ್ಗ	8. ವೆಂಕಟಪುರ	15. ಮಲವಗೊಪ್ಪ
2. ಮಲ್ಲಿಗೇನಹಳ್ಳಿ	9. ಮುಳ್ಳಕೆರೆ	16. ತೊಪ್ಪಿನಷಟ್ಟ
3. ಅಕ್ಕೊಳ	10. ನವಿಲೆ	17. ಊರಗದೂರು
4. ಕಲ್ಲಹಳ್ಳಿ	11. ತೆವರಪಟ್ನದಳ್ಳಿ	18. ವಡ್ಡಿನಕೊಪ್ಪ ಮಜರೆ ಊರಗ
5. ಕಾಶಿಪುರ	12. ಇಸ್ಲಾಪುರ	ದೂರು
6. ಪೂಮೀನಕೊಪ್ಪ	13. ಪುರಲೆ	19. ಸೊಳೆಬೈಲು
7. ಬೊಮ್ಮನದಳ್ಳಿ	14. ಹರಿಗೆ	20. ಹರಕೆರೆ

21. ಮಂಡ್ಲಿ 22. ಗೋಪಶೆಟ್ಟಿಕೊಪ್ಪ 23. ಗೋಪಾಳ 24. ಗಾಡಿಕೊಪ್ಪ

ಅ) ಇದೆ

ಇ) 9832 ಅರ್ಜಿಗಳು

6383 ಅರ್ಜಿಗಳು

ಈ) ಹೌದು

ಉ) ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಬಗರ್ ಹುಕಂ ಸಕ್ರಮೀಕರಣ

515 (835) ಶ್ರೀ ಆಗರ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಎಷ್ಟು ಬಗರ್‌ಹುಕುಂ ಸಕ್ರಮೀಕರಣ ಸಮಿತಿಗಳು ಕೆಲಸ ನಿರ್ವಹಿಸುತ್ತಿವೆ; ಇವುಗಳ ಮುಂದೆ ಎಷ್ಟು ಪ್ರಕರಣಗಳು ವಿಚಾರಣೆಗೆ ಬಾಕಿ ಇದೆ (ತಾಲ್ಲೂಕುವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು)?

ಆ) ಬಗರ್‌ಹುಕುಂ ಸಾಗುವಳಿಗೆ ಸ್ವೀಕರಿಸಿರುವ ಅರ್ಜಿಗಳಲ್ಲಿ ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ (ವಿವರ ನೀಡುವುದು)?

ಇ) ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣಕ್ಕಾಗಿ ಅರ್ಜಿ ಸ್ವೀಕರಿಸಲು ಕಾಲಾವಕಾಶ ವಿಸ್ತರಿಸಲಾಗುವುದೆ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಒಟ್ಟು 200 ಸಮಿತಿಗಳು (ಸಾಮಾನ್ಯ 172 ಹೆಚ್ಚುವರಿ 28) 3,62,145 ಅರ್ಜಿಗಳು ಬಾಕಿ ಇರುತ್ತವೆ.

ಆ) 7,24,681 ಅರ್ಜಿಗಳು

ಇ) ಕಾಲಾವಕಾಶ ನೀಡುವ ವಿಷಯವು ಸರ್ಕಾರದ ಮುಂದೆ ಇರುವುದಿಲ್ಲ.

ಅಂಗನವಾಡಿ ಆಹಾರ ಪದಾರ್ಥ ಕೊಳ್ಳುವುದರಲ್ಲಿ ಅವ್ಯವಹಾರ

516 (834) ಶ್ರೀ ಅಂಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯರಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಂಗನವಾಡಿಗಳ ಮೂಲಕ ಪೂರಕ ಪೌಷ್ಟಿಕ ಆಹಾರ ಒದಗಿಸುವುದಕ್ಕಾಗಿ ಯಾವ ಯಾವ ಪದಾರ್ಥಗಳನ್ನು ಕೊಂಡು ಕೊಳ್ಳಲಾಗಿದೆ?